ಬಂದ ಸುದ್ದಿಗಳ ಪ್ರಕಾರ.

" The Union Leaders have discussed with the president and Board of Directors of the Hassan Milk Union. As on today as at this moment, there is no strike" This is the fax message.

ಶ್ರೀ ಎಸ್.ಎಸ್.ಪಾಟೀಲ್: ತಾವುಗಳು ಫಾಕ್ಸ್ ಮೆಸೇಜ್ ಎಂದು ಇಂಗ್ಲೀಷ್‌ನಲ್ಲಿಯೇ ಹೇಳುತ್ತಾ ಇದ್ದೀರಿ. ಅದನ್ನೇ ಕನ್ನಡದಲ್ಲಿಯೂ ಹೇಳಬಹುದಲ್ಲವೆ?

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಸದಸ್ಯರ ಪ್ರಸ್ತಾಪಕ್ಕೆ ಸ್ವಲ್ಪ ನಮ್ಮದಿತರಲು ಈ ವಿಚಾರವನ್ನು ಹೇಳಲು ಪ್ರಯತ್ನ ಮಾಡಿದೆ. ಈಗ ಯೂನಿಯನ್ನಿನ ಮುಖಂಡರುಗಳು ಸೇರಿ ನಮ್ಮ ಬೋರ್ಡ್ ಆಫ್ ಡೈರೆಕ್ಟರ್ಸ್ ಮತ್ತು ಅಧ್ಯಕ್ಷರು ಸೇರಿ, ಮಾತುಕತೆಯನ್ನು ಅವರ ಕಚೇರಿಯಲ್ಲಿ ನಡೆಸುತ್ತಿದ್ದಾರೆ. ಈಗ ಅಲ್ಲಿ ಸ್ಟ್ರೈಕ್‌ನ್ನು ಸ್ಥಗಿತ ಮಾಡಿದ್ದಾರೆ. ಅಲ್ಲಿ ಮಾಮೂಲಿಯಾಗಿ ಕೆಲಸ ನಡೆಯತ್ತಾ ಇದೆ. ಮುಂದೆ ನಾವು ಮಾಡಬೇಕಾದಂಥ ಕೆಲಸಗಳ ಬಗ್ಗೆ ತಾವುಗಳು ಮಾಡಿದ ಆರೋಪಗಳ ಬಗ್ಗೆ ನಾಡಿದ್ದು ಸಮಗ್ರವಾಗಿ ಚರ್ಚೆ ಮಾಡೋಣ.

ಶ್ರೀ ಕೆ.ಹೆಚ್.ಹನುಮೇಗೌಡ: ಮಾನ್ಯ ಅಧ್ಯಕ್ಷರೆ, ಅಲ್ಲಿ ಮೂರು ದಿನಗಳಿಂದ ಸ್ಟ್ರೈಕ್ ನಡೆಯುತ್ತಾ ಇದೆ. ಡಿಸಿ, ಯೂನಿಯನ್ ಲೀಡರ್ಸ್, ಎಲ್ಲಾ ಸೇರಿ ಪ್ರಯತ್ನ ಮಾಡುತ್ತಿದ್ದಾರೆ. ಆದರೂ ಮೆನೇಜ್‌ಮೆಂಟ್‌ನವರು ಒಪ್ಪುತ್ತಾ ಇಲ್ಲ.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಹಿರಿಯ ಸದಸ್ಯರಿಗೆ ಬಹುಶಃ ಈ ವಿಚಾರ ಗೊತ್ತಿಲ್ಲವೆಂದು ಕಾಣುತ್ತದೆ. ಪಬ್ಲಿಕ್ ಸೆಕ್ಟಾರ್‌ನಲ್ಲಿ 10ದಿನಗಳ ಸ್ಟ್ರೈಕ್ ನಡೆಯಿತು. ಹೀಗೆ ಆಗುತ್ತಿರುತ್ತದೆ. ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಈಗ ಸಮಸ್ಯೆಗೆ ಪರಿಹಾರವನ್ನು ಹುಡುಕಲು ಪ್ರಯತ್ನ ಮಾಡುತ್ತಿದ್ದೇವೆ. ನಾಡಿದ್ದಿನವರೆಗೆ ನಮಗೆ ಸಮಯಾವಕಾಶ ಕೊಡಿ. 6 ತಿಂಗಳಿಂದ ಇದನ್ನು ತಾವುಗಳು ಪ್ರಸ್ತಾಪ ಮಾಡಿಲ್ಲ. ಮಾಡಿದ್ದಲ್ಲಿ ಎಷ್ಟೋ ಒಳ್ಳೆಯದಾಗಿರುತ್ತಿತ್ತು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನ್ಯಾಯಾಧೀಶರ ಹಲವಾರು ಹುದ್ದೆಗಳನ್ನು ತುಂಬುವ ವಿಚಾರ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ): ಮಾನ್ಯ ಅಧ್ಯಕ್ಷರೆ, ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಧೀಶರುಗಳ ಹಲವಾರು ಹುದ್ದೆಗಳನ್ನು ತುಂಬುವ ಸಲುವಾಗಿ ಸಂದರ್ಶನವನ್ನು ಮಾಡಿರುತ್ತಾರೆ. ಈ ರೀತಿ ಸಂದರ್ಶನವನ್ನು ಮಾಡುವ ಸಂದರ್ಭದಲ್ಲಿ ಯಾವ ಯಾವ ಹುದ್ದೆಗಳಿಗೆ ಎಷ್ಟೆಷ್ಟು ಅಭ್ಯರ್ಥಿಗಳನ್ನು ಕರೆದಿದ್ದರು ಮತ್ತು ಸಂದರ್ಶನಕ್ಕೆ ಉಪಯೋಗಿಸಿದ ಮಾನದಂಡ ಏನು ಎಂಬುದು ತಿಳಿದುಬಂದಿಲ್ಲ. ಈ ಹುದ್ದೆಗಳನ್ನು ತುಂಬುವ ಸಲುವಾಗಿ ಸಂದರ್ಶನ ನಡೆಯುವ ಸಂದರ್ಭದಲ್ಲಿ ಲೋಪಗಳು ಉಂಟಾಗಿವೆ ಎಂದು ಹಲವಾರು ಅಭ್ಯರ್ಥಿಗಳಿಂದ ದೂರುಗಳು ಬಂದಿವೆ ಎಂದು ತಿಳಿದು

ಬಂದಿರುತ್ತದೆ. ಆದಕಾರಣ ಈ ವಿಷಯವು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಸನ್ಮಾನ್ಯ ಸಂಸದೀಯ ಮತ್ತು ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ಇದು ಕೋರ್ಟ್‌ಗೆ ಸಂಬಂಧಪಟ್ಟಂಥ ವಿಚಾರ. ನಾನು ಕೂಡ ಇವರು ಕಳುಹಿಸಿದಂಥ ಮಾಹಿತಿಗಳಿಗಾಗಿ, ಹೈಕೋರ್ಟ್‌ನ ರಿಜಿಸ್ಟ್ರಾರ್‌ರವರ ಮೂಲಕ ವರದಿಯನ್ನು ಮೂಲಕವರ ಕಳುಹಿಸಿಕೊಡಲು ಹೇಳಿದ್ದೆ. ರಾಜ್ಯಾಂಗದ 235ನೇ ವಿಧಿಯಂತೆ ಮಾಹಿತಿಗಳನ್ನು ಒದಗಿಸಲಾಗುವುದಿಲ್ಲ ಎಂದು ಅವರು ಹೇಳಿದ್ದಾರೆ. ಅದನ್ನು ಹೈಕೋರ್ಟ್‌ನ ಹಿರಿಯ ಪ್ರಾಕ್ಟೀಸಿಂಗ್ ಅಡ್ವೋಕೇಟ್. . . ಅವರ ಗಮನಕ್ಕೆ ಹಾಗೂ ಅವರ ಮಡಿಲಿಗೇ ವಿಚಾರವನ್ನು ಹಾಕಿದ್ದೇನೆ. ಏಕೆಂದರೆ ಇದು ಸರಕಾರದ ಕೈಯ್ಯಲ್ಲಿಲ್ಲ. ಹೈಕೋರ್ಟ್‌ನವರು ಮಾಹಿತಿಗಳನ್ನು ನಮಗೆ ಕಳುಹಿಸಿಕೊಟ್ಟರೆ ಮಾತ್ರ ನಾವು ಇಲ್ಲಿ ಕೊಡಬಹುದು. ಅವರು ಕಳುಹಿಸುವುದಕ್ಕೆ ಆಗುವುದಿಲ್ಲ ಅಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ವಿಚಾರವು ನ್ಯಾಯಾಧೀಶರ ವರ್ತನೆ ಬಗ್ಗೆ ಆಗಲಿ, ಜಡ್ಜ್‌ಮೆಂಟ್ ಬಗ್ಗೆಯಾಗಲೀ ನಾವಿಲ್ಲಿ ಪ್ರಸ್ತಾಪ ಮಾಡಿಲ್ಲ. ನಾವು ಕೇಳಿರತಕ್ಕಂಥಾದ್ದು ಇನ್‌ಸಿಡೆಂಟಲ್ ಆಗಿ what are the facts, how many people were interviewed, and how many were selected, who are those who have been selected. Art.211 of the Constitution immunity is there. We canot discuss the conduct of Judges. ಜಡ್ಜ್‌ಸ್‌ರವರ ವರ್ತನೆ ಬಗ್ಗೆ ನಾವು ಕೇಳುತ್ತಾ ಇಲ್ಲ. ಶೀರ್ಷಗಳ ಬಗ್ಗೆ ಕೇಳುತ್ತಿಲ್ಲ. ಈ ವಿಷಯದ ಬಗ್ಗೆ ತಾವುಗಳು ದೀರ್ಘವಾಗಿ ಯೋಚನೆ ಮಾಡಿ. ಏಕೆಂದರೆ, ಇದು ಬಹಳ ಮುಖ್ಯವಾದ ವಿಚಾರ...

ಅಧ್ಯಕ್ಷರು: ಸುಬ್ಬಾರೆಡ್ಡಿಯವರೆ, ನಾನು ಇಲ್ಲಿ ಸದಸ್ಯನಿದ್ದಾಗ ನನ್ನ ಅನುಭವದ ಪ್ರಕಾರ ಇಂಥ ವಿಚಾರಗಳಲ್ಲಿ ಹೈಕೋರ್ಟ್‌ನವರನ್ನು ಅನೇಕ ಸಲ ಸ್ಪಾಟಿಫಿಕಲ್ ಇನ್‌ಫಾರ್ಮೇಶನ್ ಕೇಳಿದಾಗ ಇದೇ ತರಹದ ಉತ್ತರಗಳು ಬಂದಿವೆ. ಆದರ ಬಗ್ಗೆ ನಾವು ಕುಳಿತುಕೊಂಡು ಬಿಎಸಿ.ಮೀಟಿಂಗ್‌ನಲ್ಲಿ ಇಟ್ಟು ಇಂಥ ಸಬ್‌ಜೆಕ್ಟ್ಸ್ ಬಗ್ಗೆ ಏನು ಮಾಡಬೇಕೆಂದು ಮಾಡೋಣ. ಓಪನ್ ಆಗಿ ಆರ್ಟಿಕಲ್ 211ರ ಪ್ರಕಾರ ಆ ಬಗ್ಗೆ ಡಿಸಕಸ್ ಮಾಡುವುದು ಅಷ್ಟು ಚೆನ್ನಾಗಿ ಇರುವುದಿಲ್ಲ. ಬಿಎಸಿ. ಮೀಟಿಂಗ್‌ನಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರುಗಳ ಜೊತೆಗೆ ಮಾತನಾಡೋಣ. ಈಗ ಆ ಪ್ರಸ್ತಾಪ ಬೇಡ.

5. ಗಮನ ಸೆಳೆಯುವ ಸೂಚನೆ

ನವದೆಹಲಿಯ ಕರ್ನಾಟಕ ಭವನದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳನ್ನು ಖಾಯಂಗೊಳಿಸದಿರುವುದರಿಂದ ಹಂಗಾಮಿ ನೌಕರರುಗಳಿಗೆ ಉಂಟಾಗಿರುವ ತೊಂದರೆ.

ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ನವದೆಹಲಿಯ ಕರ್ನಾಟಕ ಭವನದಲ್ಲಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ನೌಕರರುಗಳನ್ನು